**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ.**

**ಸಿ.ಸಿ ನಂ: 1885/2025**

ಪಿ.ಡಬ್ಲ್ಯೂ **- 2**
ಸಿ.ಡಬ್ಲ್ಯೂ **- 4**

ಹೆಸರು : ಲಕ್ಷ್ಮಣ ಖೇಮಾ ಕಸಾರಲೇಕರ

ವಯಸ್ಸು : **54** ವರ್ಷ

ಉದ್ಯೋಗ : ಒಕ್ಕಲುತನ

ವಾಸ : ಅಮಟೆ

ದಿನಾಂಕ 18-07-2026 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಸಸಅ ರವರಿಂದ**

ಚಾಸಾ 1 ರವರು ಗೊತ್ತು. ಚಾಸಾ 5 ಗೊತ್ತಿಲ್ಲ. ಮೃತ ದರ್ಶನ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಅಂತಾ ಗುರುತಿಸಲಾಯಿತು. ಈಗ್ಗೆ ಒಂದು ವರ್ಷ ಹಿಂದೆ ನಾನು ಪೊಲೀಸ ಠಾಣೆಯಲ್ಲಿ ನಿಪಿ-2 ಕ್ಕೆ ಸಹಿ ಮಾಡಿದ್ದೇನೆ. ಸದರಿ ಸಹಿ ಯಾವ ಕಾರಣಕ್ಕೆ ಮಾಡಿದ್ದೇನೆ ಅಂತಾ ಗೊತ್ತಿಲ್ಲ. ಸಾಕ್ಷಿಗೆ ನಿಪಿ-3 ರಿಂದ 8 ರವರೆಗಿನ ಛಾಯಾಚಿತ್ರಗಳನ್ನು ತೋರಿಸಲಾಗಿ, ಅದರಲ್ಲಿ ತಾವು ಇರುವುದನ್ನು ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ಹಬ್ಬಾನಟ್ಟಿ ರಸ್ತೆಯ ಮೇಲೆ ತೆಗೆದಿರುತ್ತಾರೆ. ಫೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ಅಂತಾ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಏನನ್ನೂ ಜಪ್ತಿಪಡಿಸಿಕೊಂಡಿಲ್ಲ.

***(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)***

ಪಾಟೀ ಸವಾಲುಃ ಸಸಅ ರವರಿಂದ

ದಿಃ 30.06.2025 ರಂದು ಬೆಳಗ್ಗೆ 10.00 ಗಂಟೆ ಸುಮಾರಿಗೆ ನನ್ನನ್ನು ಮತ್ತು ಚಸಾ 5 ರವರನ್ನು ಬೆಳಗಾವಿ-ಚೊರ್ಲಾ ರಸ್ತೆಯ ಮೇಲೆ ಹಬ್ಬಾಗನಟ್ಟಿ ಗ್ರಾಮದ ಹತ್ತಿರ ಪಂಚರನ್ನಾಗಿ ನನ್ನನ್ನು ಕರೆದಿದ್ದರು ಅಂದರೆ ಸರಿ . ದಿಃ29.06.2025 ರಂದು ಬೆಳಗಾವಿ-ಚೊರ್ಲಾ ರಸ್ತೆಯ ಮೇಲೆ ಹಬ್ಬಾಗನಟ್ಟಿ ಗ್ರಾಮದ ಹತ್ತಿರ ಟಾಟಾ ಕಂಟೇನರ್ ಗಾಡಿ ಸಂಖ್ಯೆ ಕೆಎ-22/ಎಎ-9574 ಹಾಗೂ ಮೋಟರ ಸೈಕಲ ಸಂಖ್ಯೆ ಕೆಎ-63/ಎಕ್ಸ-2459 ಇವುಗಳ ಮಧ್ಯ ಅಪಘಾತವಾಗಿದ್ದರಿಂದ ನನ್ನನ್ನು ಪಂಚನಾಮೆಗೆ ಕರೆಸಿದ್ದರು ಅಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಗ್ಗೆ 10.00 ಗಂಟೆಯಿಂದ 11.00 ಗಂಟೆ ವೆರೆಗೆ ಮಾಡಿ ಮುಗಿಸಲಾಯಿತು ಅಂದರೆ ಸರಿ . ನಂತರ ಪೊಲೀಸರು ನನನ್ನು ವಾಹನ ನಿಲುಗಡೆ ಮಾಡಿದ ಸ್ಥಳ ಜಾಂಬೋಟಿ ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿ ಚಾಸಾ 1 ರವರು ತೋರಿಸಿದ ವಾಹನದ ಪಂಚನಾಮೆ ಮಾಡಲಾಯಿತು ಅಂದರೆ ಸರಿಯಲ್ಲ. ಪೊಲೀಸರು ಪಂಚನಾಮೆ ಮಾಡಿ ಮೋಟರ ಸೈಕಲ ಮತ್ತು ಕಂಟೇನರನ್ನು ತಮ್ಮ ವಶಕ್ಕೆ ಪಡೆದರು ಅಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಗ್ಗೆ 11.20 ರಿಂದ 12.30 ರವೆರೆಗೆ ಮಾಡಿ ಮುಗಿಸಲಾಯಿತು ಅಂದರೆ ಇರಬಹುದು. ನಿಪಿ-3 ರಿಂದ 8 ರ ಫೋಟೋಗಳನ್ನು ಆಯಾ ಸ್ಥಳಗಳಲ್ಲಿ ತೆಗೆಯಲಾಯಿತು ಅಂದರೆ ಸರಿ .ಆಯಾ ಸ್ಥಳಗಳಲ್ಲಿ ಪಂಚನಾಮೆ ಮಾಡಿ ನಮ್ಮ ಸಹಿ ಪಡೆಯಲಾಯಿತು ಅಂದರೆ ಸರಿ .

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ</u>

ಆರೋಪಿಪರ ವಕೀಲರು ಗೈರುಹಾಜರಿದ್ದು, ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.